# ಭಾರತೀಯ ಸಂಸ್ಕೃತಿಯಲ್ಲಿ ಹರಿಕಥಾ ಪರಂಪರೆ

**ಡಾ. ದತ್ತಾತ್ರೇಯ ಎಲ್ ವೇಲಣಕರ್**

ಹರಿಕಥೆಯ ಮಾಧ್ಯಮದ ಮೂಲಕ ಧರ್ಮ, ಅಧ್ಯಾತ್ಮ, ಭಕ್ತಿ , ನೀತಿ ಇವುಗಳನ್ನು ಜನಸಾಮಾನ್ಯರಲ್ಲಿ ಜಾಗೃತಗೊಳಿಸುತ್ತ, ಭಾರತದ ಸಂಸ್ಕೃಯನ್ನು ಸಮಾಜದಲ್ಲಿ ದೃಢಗೊಳಿಸುವ ಸಮರ್ಥ ಮಾಧ್ಯಮವೇ ಹರಿಕಥೆ. ಈ ಕುರಿತು ಇಲ್ಲಿ ವಿವರಿಸಿರುವ ಲೇಖಕರು ಪ್ರಸಿದ್ಧ ಹಿಂದೂ ಸ್ತಾನಿ ಸಂಗೀತಗಾರರೂ, ಪರಂಪರಾಗತ ಹರಿಕಥೆಯ ಕಲಾವಿದರೂ ಆಗಿದ್ದಾರೆ. ಶ್ರೀರಾಮಕೃಷ್ಣರ, ಹಾಗೂ ಇನ್ನಿತರ ಸಂತರ ಮೇಲೆ ಅವರು ನೀಡಿರುವ ಹರಿಕಥಾ ಕಾರ್ಯಕ್ರಮಗಳು ಅತ್ಯಂತ ಜನಪ್ರಿಯವಾಗಿವೆ. ಸಂಗೀತ ಅಧ್ಯಯನ- ಅಧ್ಯಾಪನ ಗಳಲ್ಲಿ ಸದಾ ನಿರತರಾಗಿರುವ ಅವರು ಇಂಗ್ಲಿಷಿನಲ್ಲಿ ‘Swami Vivekananda's Contribution to Indian Classical Music’ ಎಂಬ ಒಂದು ಗ್ರಂಥವನ್ನೂ ರಚಿಸಿದ್ದಾರೆ.

ಕಥಾಕೀರ್ತನೆ, ಹರಿಕಥೆ, ಕಥಾಕಾಲಕ್ಷೇಪಂ, ಕಥಾಪ್ರಸಂಗಂ, ಕೀರ್ತನೆ, ಸಂಕೀರ್ತನಂ, ಭಾಗವತಕಥಾ, ಶ್ರೀರಾಮಕಥಾ, ಇವೆಲ್ಲವೂ ಹರಿಕಥೆಯೇ ಆಗಿದೆ. ಪ್ರಾದೇಶಿಕ, ಪ್ರಾಂತೀಯ ಭಾಷಾ ವ್ಯತ್ಯಯದಿಂದ ಬೇರೆ-ಬೇರೆಯಾಗಿ ಕರೆಯುತ್ತಿದ್ದರೂ ಕಲಾಪ್ರಕಾರ ಒಂದೇ ಆಗಿದೆ. ಕಥಾಕೀರ್ತನ ಕಲೆಯು ಪ್ರಾಚೀನ ವಾದ, ಜನಪ್ರಿಯವಾದ, ಜನಮಾನ್ಯವಾದ, ಪ್ರಭಾವಿಯಾದ ಮಹತ್ವಪೂರ್ಣ ಸಾಂಸ್ಕೃತಿಕ ಒಂದು ಸಂಸ್ಥೆಯಾಗಿದೆ. ಎಲ್ಲ ಕಲೆಗಳೂ ಕಲೆತುಕೊಂಡಿರುವುದು ಕಥಾಕೀರ್ತನದಲ್ಲಿ. ಗಾಯನ, ನರ್ತನ, ವಾದನ, ಎಂಬ ತ್ರಿವೇಣಿಯು ಪೂರ್ಣರೂಪದಿಂದ ಇದರಲ್ಲಿ ಸೇರಿಕೊಂಡಿದೆ. ಭಕ್ತಿ, ಧರ್ಮ, ಸಂಸ್ಕೃತಿ, ಲೋಕನೀತಿ, ಜೀವನಾದರ್ಶಗಳು, ಆದರ್ಶ ನಡತೆ, ವ್ಯಕ್ತಿವಿಕಾಸ, ಮನೋ ಸಂಸ್ಕಾರ, ಆತ್ಮೋದ್ಧಾರ, ರಾಷ್ಟ್ರ ಪ್ರೇಮ, ಗುರು-ಹಿರಿಯರಲ್ಲಿ ಆದರ, ಪೂಜ್ಯಭಾವ, ಇವುಗಳನ್ನು ಪರಿಣಾಮಕಾರಿಯಾಗಿ ಜನ ಮಾನಸಕ್ಕೆ ತಲುಪಿಸುವ ಮಾಧ್ಯಮವೆಂದರೆ ಕಥಾಕೀರ್ತನೆ ಒಂದೇ ಆಗಿದೆ. ಭಾರತದ ಅಸಂಖ್ಯ ಹಳ್ಳಿಗಳ ಸರಳ, ಸುಸಂಸ್ಕೃತ, ಹೃದಯ ಸಂಪನ್ನ, ಮುಗ್ಧ ಜನರಿಗೆ, ಪಾಪ-ಪುಣ್ಯ, ಪುರಾಣ -ಇತಿಹಾಸ, ಧರ್ಮ- ಸಂಸ್ಕೃತಿ, ಜೀವನ-ಉಜ್ಜೀವನ, ಭಕ್ತಿ-ಶ್ರದ್ಧೆ, ವಿಡಂಬನೆ, ವಿನೋದ ಮುಂತಾದ ವಿಷಯಗಳನ್ನು ಅವರಿದ್ದಲ್ಲಿಗೆ ಹೋಗಿ ಕೀರ್ತನ ಕಲಾ ಮಾಧ್ಯಮದಿಂದ ಕೀರ್ತನಕಾರರು ಬೋಧಿಸುತ್ತಾರೆ. ಸಮಾಜದಲ್ಲಿ ಉದಾತ್ತ ಆದರ್ಶವಾದ ಜನಮಾನಸವನ್ನು ನಿರ್ಮಾಣ ಮಾಡುವಲ್ಲಿ ಹರಿಕಥೆಯಂತಹ ಸಾಧನೆ ಬೇರೆ ಇರಲಾರದು. ಕಥಾಕೀರ್ತನವು ಒಂದು ಸಂಚಾರಿ ವಿಶ್ವವಿದ್ಯಾಲಯದಂತೆ ಅಲೆದಾಡುವ ಜ್ಞಾನಕೋಶವೇ ಆಗಿದೆ. ಪಂಡಿತರಿಂದ ಪಾಮರರವರೆಗೆ ಚಿರಪರಿಚಿತವಾದ ಹರಿಕಥೆಯು ಪ್ರಾಚೀನವೂ, ಬೋಧಪ್ರದವೂ, ಪುಣ್ಯಪ್ರದವು, ಕಲಾಪೂರ್ಣವೂ ಆಗಿದೆ.



ಕೀರ್ತನೆಯು ನಮ್ಮ ವರ್ತನೆಯನ್ನು ತಿದ್ದುವುದು, ಕೀರ್ತನೆಯೇ ಆತುರತೆಯನ್ನು ಹರಿಸುವುದು. ಕೀರ್ತನೆಯೇ ಮಾನ್ಯ, ಕೀರ್ತಿಸುವವನೇ ಧನ್ಯ. ಸತತವಾಗಿ ಭಗವಂತನ ಅವಧಾನ ವನ್ನರಿತುಕೊಂಡು ಸರ್ವಾಂಗ ಪರಿಪೂರ್ಣವಾದ ಪುರಾಣಕಥೆಯನ್ನೋ, ಇತಿಹಾಸದ ಕಥೆಯನ್ನೋ, ಸಂತಚರಿತ್ರೆಯನ್ನೋ, ನಿರೂಪಣಾ ವಿಷಯವಾಗಿಟ್ಟುಕೊಂಡು, ವೇದಾಂತ ವಿಚಾರ, ಭಕ್ತಿಶಾಸ್ತ್ರ, ಸಾಧನಾ ಸಂಪತ್ತು, ಲೋಕನೀತಿ, ಪ್ರಕೃತ ಧರ್ಮದ ದೇಶದ ಸಮಾಜದ ನೈಜ ಸ್ಥಿತಿಯವರೆಗಿನ ಚಿತ್ರಣ, ಸಮಾಜ ಶಿಕ್ಷಣ, ವ್ಯಕ್ತಿ ವಿಕಸನ ಮುಂತಾದ ವಿಷಯಗಳನ್ನು ಕಥೆಯ ಸನ್ನಿವೇಶಕ್ಕೆ ಹೊಂದಿಸಿ ಹೇಳುವ ಕೌಶಲ್ಯ ಉತ್ತಮ ಕಥಾಕೀರ್ತನ ಕಲಾವಿದರಾದ ಹರಿದಾಸರಿಗೆ ಇರುತ್ತದೆ. ಕಥೆಯ ಮುಖ್ಯ ತತ್ವಗಳನ್ನು ನಿರೂಪಿಸುವಾಗ ತತ್ವದ ಪುಷ್ಟಿಗಾಗಿ, ಸ್ಪಷ್ಟೀಕರಣಕ್ಕಾಗಿ ಮೂಲ ಕಥೆಗೆ ಅತೀ ಸಮೀಪವರ್ತಿಯಾದ ಉಪಕಥೆ (ಉಪ-ಸಮೀಪೆ)ಗಳನ್ನು ದೃಷ್ಟಾಂತಗಳನ್ನು ಜೋಡಿಸುವುದು, ಕಥೆಯಲ್ಲಿನ ನವರಸಗಳ ಅಭಿವ್ಯಕ್ತಿಗಾಗಿ ಸಂಗೀತದ ಅನೇಕ ರಾಗಗಳನ್ನು ಅಳವಡಿಸುವುದು; ತಬಲ, ಮೃದಂಗ, ಹಾರ್ಮೋನಿಯಂ ಪಿಟೀಲು ಮುಂತಾದ ಪಕ್ಕವಾದ್ಯಗಳನ್ನಿರಿಸಿಕೊಂಡು, ರಸವತ್ತಾದ ಗಾಯನ ಮಾಡುವುದು ಕಥಾಕೀರ್ತನೆಯಲ್ಲಿ ಇರುತ್ತದೆ. ಹರಿಕಥಾನಿರೂಪಣೆಯ ಮೂಲಕ ಭಾವಪೂರ್ಣವಾಗಿ ಶ್ರೋತೃಗಳ ಅಂತರಂಗವನ್ನು ತಟ್ಟಿ, ತತ್ವ ವಿಚಾರಗಳನ್ನು ಬುದ್ಧಿಗೆ ಉಣಿಸಿ, ಕರ್ಣಾನಂದಮಯವಾಗಿ ಹೇಳುವುದೇ ಕಥಾಕೀರ್ತನೆಯಾಗಿದೆ. ಧರ್ಮ, ಸಂಸ್ಕೃತಿ, ನೀತಿ, ನಿಯಮ, ಭಕ್ತಿ, ಜ್ಞಾನ, ವೈರಾಗ್ಯ, ಮುಂತಾದವುಗಳ ಕುರಿತು ಆದರ ನಿರ್ಮಾಣ ಮಾಡಿ, ಸಮಾಜ ದಲ್ಲಿನ ತುಚ್ಛವಾದ ಅನಿಷ್ಟ ವಿಷಯಗಳ ಕಡೆಗೆ ಅನಾದರ ಉಂಟಾಗುವಂತೆ ಮಾಡಿ, ಅಂಧಶ್ರದ್ಧೆಯನ್ನು ಟೀಕಿಸಿ, ಭೋಗ ಮಯ ಉಚ್ಛೃಂಖಲ

ಜೀವನದಿಂದ ಪರಾಙ್ಮುಖವಾಗುವಂತೆ, ಜಗತ್ತಿನ ಭೋಗದ ಅನಿತ್ಯತೆಯನ್ನು, ಅಸ್ಥಿರತೆಯನ್ನು, ಪರಿ ಣಾಮಕಾರಿಯಾಗಿ ಬೋಧಿಸಿ, ಸಮಾಜದ ದಿವ್ಯ ಮಾರ್ಗ ದರ್ಶನವನ್ನು ಕಲಾತ್ಮಕವಾಗಿ ಪ್ರದರ್ಶಿಸುವ ಕಲಾ ಮಾಧ್ಯಮವೇ ಹರಿಕಥೆ.

ನಮ್ಮ ಆರ್ಷೇಯ ಸಾಂಸ್ಕೃತಿಕ ಸಂಪತ್ತಾದ ಪುರಾತನ ಪುರಾಣಗಳು, ಯಾವ ಉದ್ದೇಶದಿಂದ ನಿರ್ಮಾಣಗೊಂಡವೋ ಆ ಉದ್ದೇಶವನ್ನು ಸಾಧಿಸಲೋಸುಗವೇ ಕಥಾಕೀರ್ತನೆಯ ಉಗಮ ವಾಗಿದೆ. ಇಂತಹ ಸಾಂಸ್ಕೃತಿಕ ಮೂಲದಿಂದ ಬಂದ ಕೀರ್ತನೆಯ ಧ್ಯೇಯವೂ ಅಷ್ಟೇ ಉದಾತ್ತ-ಮಹತ್ತರವಾದುದು. ಕಥಾ ಕೀರ್ತನ ದಲ್ಲಿ ಸಮಾಜ ಶಿಕ್ಷಣ-ಧರ್ಮ-ಸಂಸ್ಕೃತಿ-ಅಧ್ಯಾತ್ಮ-ಜ್ಞಾನ - ಕರ್ಮ- ಭಕ್ತಿ-ವೈರಾಗ್ಯಗಳ ಸಿದ್ಧಾಂತಗಳು, ಉಜ್ಜೀವನಕ್ಕಾಗಿ ಇರುವ ಸಾಧನಾ ಮಾರ್ಗಗಳ ನಿರ್ದೇಶನ, ಪ್ರಾಚೀನ ಸಾಹಿತ್ಯ ವೆನಿಸಿದ ವೇದ-ಉಪನಿಷತ್ತು-ಪುರಾಣಗಳ ಪರಿಚಯ, ಆದಿ ಕಾವ್ಯ ಶ್ರೀಮದ್‌ರಾಮಾಯಣ, ಇತಿಹಾಸವಾದ ಮಹಾಭಾರ ತಾದಿಗಳ ಒಳ-ಹೊರಪರಿಚಯ, ಕನ್ನಡ ಕಾವ್ಯಗಳ ಮಹತ್ವ- ಪರಿಚಯ, ನೈತಿಕತೆಯ ದಿಗ್ದರ್ಶನ ಇರುತ್ತದೆ. ಇವುಗಳೊಂದಿಗೆ, ಸಮಾಜದ ಅಂಕುಡೊಂಕುಗಳನ್ನು ತಿದ್ದಿ, ಅಂಧಶ್ರದ್ಧೆಯನ್ನು ಹೋಗಲಾಡಿಸಿ, ಸಮಾಜದಲ್ಲಿನ ಅನಿಷ್ಟಕರವಾದ ಮದ್ಯಪಾನ- ಜೂಜು-ವರದಕ್ಷಿಣೆ ಮುಂತಾದ ದುಷ್ಪ್ರವೃತ್ತಿಗಳನ್ನು ಖಂಡಿಸಿ, ಮನೋ ಸಂಸ್ಕಾರವನ್ನು ಎತ್ತರಿಸಿ, ಸಮಾಜಕ್ಕೆ ಉದಾತ್ತ ಧ್ಯೇಯ -ಆದರ್ಶಗಳನ್ನು ಬೋಧಿಸಿ, ವೈಯಕ್ತಿಕವಾದ ಆತ್ಮೋದ್ಧಾರಕ್ಕೆ ಅವಶ್ಯವಾದ ಮಾರ್ಗದರ್ಶನದ ಜೊತೆಗೆ ಭಾವೈಕ್ಯತೆ, ರಾಷ್ಟ್ರೈಕ್ಯತೆ ಯನ್ನು ಸಾಧಿಸಿ, ವ್ಯಷ್ಟಿ-ಸಮಷ್ಟಿಗಳ ಸರ್ವತೋಮುಖ ಉತ್ಥಾ ನದ ಧ್ಯೇಯವೇ ಕಥಾಕೀರ್ತನೆಯ ಉದ್ದೇಶ.

ಇಂದಿನ ಕಾಲದಲ್ಲಿ ಕಥಾಕೀರ್ತನದ ಪ್ರಸಾರದ ಅವಶ್ಯಕತೆ ಹಿಂದಿಗಿಂತ ಹೆಚ್ಚು ಕಂಡುಬರುತ್ತದೆ. ಸಾಮೂಹಿಕವಾದ ಧರ್ಮ, ಸಂಸ್ಕೃತಿಗಳ ಪ್ರಚಾರ ಸಾಧನ ಕೀರ್ತನವಲ್ಲದೇ ಮತ್ತೊಂದಿರ ಲಾರದು. ಕಥಾಕೀರ್ತನವು ಶಾಸ್ತ್ರೀಯ ಸಂಗೀತ, ನೃತ್ಯ, ಅಭಿ ನಯ, ಜಾನಪದ, ಗಮಕ, ವಾಕ್ಚಾತುರ್ಯ ಇಂತಹ ಅನೇಕ ಕಲೆಗಳ ಸಮ್ಮಿಶ್ರವಾದ ವಿಶಿಷ್ಟವಾದ ಕಲಾಪ್ರಕಾರವಾಗಿದೆ. ಭಕ್ತಿ ಪ್ರಚಾರ, ಸಾಮೂಹಿಕ ಸಂವಹನದ ಅದ್ಭುತ ಪರಿಕರವಾದ ಕಥಾಕೀರ್ತ ನವು ವೇದ-ನಾದಗಳ ಸಮ್ಮೇಳ. ಶೃಂಗಾರಾದಿ ನವರಸ ಭರಿತ ವಾಗಿ ಪ್ರಸ್ತುತ ಪಡಿಸುವ ಪಂಡಿತರಿಂದ-ಪಾಮರರವರೆಗೂ ಹಾಗೂ ಆಬಾಲ-ವೃದ್ಧರಿಗೂ ಹಿತ ಕೊಡುವ ಕಲೆ ಕೀರ್ತನ ಕಲೆ. ಇದು ತ್ರಿಕಾಲಗಳನ್ನು ಸೇರಿಸುವ ಪ್ರಬುದ್ಧ ಕಲೆಯಾಗಿದ್ದು ಸಮಾಜವನ್ನು ಸಕಾರಾತ್ಮಕವಾಗಿಸುವ ಸುಲಭ ಸಾಧನವಾಗಿದೆ.

ಭಾರತೀಯ ಕಲೆಗಳ ಮೂಲ ಉದ್ದೇಶವೂ ಆತ್ಮರಂಜ ನೆಯೇ ಆಗಿದೆ. ಮನಃಸಂತೋಷದ ಜೊತೆಗೆ ಸತ್‌ಸಂಸ್ಕಾರ, ಆತ್ಮೋತ್ಕರ್ಷ, ಪಾಪ, ದೋಷ, ದುಃಖ, ಅಜ್ಞಾನಗಳ ನಾಶ. ಡಿ.ವಿ.ಜಿ. ಯವರು ಹೇಳುವಂತೆ ಭಾರತೀಯ ಕಲೆಗಳ ಪರಮ ಪ್ರಯೋಜನವೆಂದರೆ ಆತ್ಮವಿಸ್ತರಣ, ಆತ್ಮಪರಿಷ್ಕರಣ ತನ್ಮೂಲಕ ಆತ್ಮೋದ್ಧರಣ. ಆತ್ಮವಿಸ್ತರಣ ಎಂದರೆ ತಮ್ಮಂತೆ ಇತರರು ಎಂದು ಭಾವಿಸುವುದು. ತನ್ಮೂಲಕ ಸಮಾಜದಲ್ಲಿ ಸೌಹಾರ್ದತೆಯನ್ನು ಸಾಧಿಸುವುದು. ಆತ್ಮ ಪರಿಷ್ಕರಣ ಎಂದರೆ ತನ್ನಲ್ಲಿರುವ ದೌರ್ಬಲ್ಯ ದೋಷಗಳನ್ನು ಗುರುತಿಸಿಕೊಂಡು ಸಾಧನೆಯ ಮೂಲಕ ಅವು ಗಳನ್ನು ನಿವಾರಿಸಿಕೊಳ್ಳುವುದರ ಮೂಲಕ ತನ್ನನ್ನು ತಾನು ಉದ್ಧ ರಿಸಿಕೊಳ್ಳುವಂತಹದು. ಹೀಗೆ ವ್ಯಷ್ಟಿ ಮತ್ತು ಸಮಷ್ಟಿ ಎರಡರ ಉತ್ಕರ್ಷವನ್ನು ಕಲೆಯ ಮೂಲಕ ಸಾಧಿಸಲು ಸಾಧ್ಯ. ಈ ಎಲ್ಲ ಸಾಧ್ಯತೆಗಳನ್ನು ಒಳಗೊಂಡ ಒಂದು ಸಮಗ್ರ ಕಲೆ ಕಥಾ ಕೀರ್ತನೆ.

ಕಥಾಕೀರ್ತನೆಯಲ್ಲಿ ಬರುವ ಮುಖ್ಯ ಅಂಶಗಳಾದ ಸಂಗೀತ, ಕಥೆ ಮತ್ತು ಆದರ್ಶಗಳು ಭಾರತೀಯ ಸಂಸ್ಕೃತಿಯ ತಳಹದಿಯ ಮೇಲೆ ಅಲಂಕೃತಗೊಂಡಿದೆ. ಹರಿಕಥೆಯಲ್ಲಿ ಒಂದು ಕಥೆಯನ್ನು ಎಳೆಯಾಗಿಸಿ ಅದರೊಂದಿಗೆ ಅನೇಕ ವಿಷಯಗಳನ್ನು ಸೇರಿಸಿ ಸುಂದರ ಹೂವಿನ ಮಾಲೆಯಂತೆ ಪ್ರಸ್ತುತಪಡಿಸುತ್ತಾರೆ ಹರಿ ದಾಸರು. ಆ ಕಥೆಯ ಎಳೆಯ ಮೂಲಭೂತ ಹಿನ್ನೆಲೆ ನಮ್ಮ ಸಂಸ್ಕೃತಿಯೇ ಆಗಿದೆ. ಭಾರತೀಯ ಸಂಸ್ಕೃತಿ ಹೇಗೆ ವೈವಿಧ್ಯತೆ ಯಿಂದ ಕೂಡಿದೆಯೊ ಹಾಗೆಯೇ ಹರಿಕಥಾ ಪರಂಪರೆಯೂ ವೈವಿಧ್ಯಪೂರ್ಣವಾಗಿದೆ. ಭಾಷೆ, ಉಡುಪು, ಪ್ರಸ್ತುತೀಕರಣ ಮತ್ತು ಪ್ರಾದೇಶಿಕ ಸಂಸ್ಕೃತಿಯ ಪ್ರಭಾವದಿಂದ ಹರಿ ಕಥೆಯೂ ಬೇರೆ ಬೇರೆಯಾಗಿ ಕಾಣಿಸುತ್ತದೆ. ಆದರೆ ಮೂಲ ಹೇತು ಒಂದೇ ಆಗಿದೆ. ಒಂದು ದೇಶದ ಸಂಸ್ಕೃತಿಯನ್ನು ಅಲ್ಲಿನ ಕಲೆಗಳು ಪ್ರತಿ ನಿಧಿಸುತ್ತವೆ. ಹಾಗೆಯೇ ನಮ್ಮ ಹರಿಕಥಾ ಪರಂಪರೆಯು ಭಾರ ತೀಯ ಸಂಸ್ಕೃತಿಯ ಮಾಧ್ಯಮವಾಗಿ ಸಮಾಜದಲ್ಲಿ ಹಾಸು ಹೊಕ್ಕಾಗಿದೆ. ಅದನ್ನು ನಾವೆಲ್ಲಾ ಮುಂದುವರಿಸುವ ಅಗತ್ಯವೂ ಇದೆ. ಜೊತೆಗೂಡಿ ನಮ್ಮ ಭವ್ಯ ಸಾಂಸ್ಕೃತಿಕ ವಾಹಿನಿಯನ್ನು

**ಸಮಾನೋ ಮಂತ್ರಃ ಸಮಿತಿಃ ಸಮಾನೀ**
**ಸಮಾನಂ ಮನಃ ಸಹಚಿತ್ತಮೇಷಾಂ ।**
**ಸಮಾನಂ ಮಂತ್ರಮಭಿಮಂತ್ರಯೇ ವಃ**
**ಸಮಾನೇನ ವೋ ಹವಿಷಾ ಜುಹೋಮಿ ॥**

‘ನಿಮ್ಮ ಆಪ್ತಾಲೋಚನೆಯಲ್ಲಿ ಒಂದಾಗಿ, ನಿಮ್ಮ ಸಭೆ ಗಳಲ್ಲಿ ಒಂದಾಗಿ, ಸಾಮರಸ್ಯದಿಂದ ಅರ್ಥ ಮಾಡಿ ಕೊಳ್ಳುವುದರಲ್ಲಿ ನಿಮ್ಮ ಮನಸ್ಸುಗಳು ಒಂದಾಗಿರಲಿ: ಸ್ನೇಹ ಯುಕ್ತ ಆಲೋಚನೆಯ ಮೂಲಕ ನಿಮ್ಮ ನಿರ್ಧಾರಗಳಲ್ಲಿ ಒಂದಾಗಿ, ನಿಮ್ಮ ಪರಿಪೂರ್ಣವಾದ ಸಾಮರಸ್ಯದಿಂದ ನಿಮ್ಮ ಕಾಣಿಕೆಯನ್ನು ಅರ್ಪಿಸಿ.’

*— ಋಗ್ವೇದ, ೧.೧೯೧.೩*